# ದಾರ್ಶನಿಕಪಂಡಿತವಿದ್ವಾನ್ ಕೆ.ಎಸ್. ವರದಾಚಾರ್ಯರು

## ಸಂದರ್ಶಕರು: ವಿದ್ವಾನ್ ಟಿ.ಎನ್.ಪ್ರಭಾಕರ

**ಸಂದರ್ಶಕ:** ಪಂಡಿತೋತ್ತಮರಿಗೆ ಪ್ರಣಾಮಗಳು. ತ್ರೈಮಾಸಿಕ ವಾರ್ತಾಪತ್ರಿಕೆಗೆ ತಮ್ಮನ್ನು ಸಂದರ್ಶಿಸಲು ನನಗೆ ಬಹಳ ಸಂತೋಷವೆನಿಸಿದೆ. ನನ್ನ ಕೆಲವು ಪ್ರಶ್ನೆಗಳಿಗೆ ತಾವು ಉತ್ತರಿಸಬೇಕೆಂದು ಪ್ರಾರ್ಥಿಸುತ್ತೇನೆ.

**ಆಚಾರ್ಯರು:** ಒಳ್ಳೆಯದು. ನನಗೆ ತಿಳಿದಷ್ಟು ಉತ್ತರಿಸುತ್ತೇನೆ.

**ಸಂದರ್ಶಕ:** ಸಂಸ್ಕೃತ ಇಂದು ಪ್ರಸ್ತುತವೇ ?

**ಆಚಾರ್ಯರು:** ಸಂಸ್ಕೃತವು ಇಂದಿಗೂ, ಮುಂದೆಯೂ, ಈ ಹಿಂದೆಯೂ ಎಂದೆಂದಿಗೂ ಪ್ರಸ್ತುತ. ಇಂದು ವಿಭಿನ್ನ ಕ್ಷೇತ್ರಗಳಲ್ಲಿ ಅಧ್ಯಯನ, ಸಂಶೋಧನೆಗಳು ವರ್ಧಿಸಿದಂತೆ ಹೊಸ ಹೊಸ ಜ್ಞಾನಶಾಖೆಗಳು ಹುಟ್ಟಿಕೊಂಡಿವೆ. ಈ ಎಲ್ಲಾ ಹೊಸಜ್ಞಾನಸಾಖೆಗಳೊಂದಿಗೆ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಸಂಸ್ಕೃತಭಾಷೆಯ, ಸಾಹಿತ್ಯದ, ಶಾಸ್ತ್ರವಾಙ್ಮಯದ ನಿಕಟ ಸಂಬಂಧವಿದೆ. ಆದರೆ ಈ ಎಲ್ಲವನ್ನು ತಿಳಿಯಲು ಬೇಕಾದ ನಾನಾ ಶಾಸ್ತ್ರಗಳನ್ನು ನಾವಿಂದು ಪಾತಾಳಕ್ಕೆ ತಳ್ಳಿದ್ದೇವೆಂಬುದು ಶೋಚನೀಯ ವಿಷಯ. ಇದಕ್ಕೆ ಒಂದೆರಡು ಉದಾಹರಣೆ ನೀಡಬಯಸುತ್ತೇನೆ.

**ಸಂದರ್ಶಕ:** ಅವಶ್ಯವಾಗಿ ನೀಡಿ.

**ಆಚಾರ್ಯರು:** ನೋಡಿ, ಇಂದು ಜೀವನದ ಎಲ್ಲ ಕ್ಷೇತ್ರಗಳಲ್ಲಿ ತೀವ್ರಗತಿಯಲ್ಲಿ ಬೆಳೆಯುತ್ತಿರುವ ಮ್ಯಾನೇಜ್‌ಮೆಂಟ್ ತಂತ್ರಗಳನ್ನು ಕೌಟಿಲ್ಯನ ಅರ್ಥಶಾಸ್ತ್ರ ಹಾಗೂ ಶುಕ್ರಾಚಾರ್ಯರ ಶುಕ್ರನೀತಿ ಸಾರದಲ್ಲಿ ಕಾಣಬಹುದಾಗಿದೆ. ಮಾನವಸಂಪನ್ಮೂಲದ ಬಳಕೆಯ ಬಗ್ಗೆ ರಾಮಾಯಣದಲ್ಲಿ ನೋಡಬಹುದಾಗಿದೆ. ಕೇವಲ ಮಾನವಸಂಪನ್ಮೂಲವೇ ಮಾತ್ರವಲ್ಲ, ಶ್ರೀರಾಮನು ವಾನರಸೇವೆ ಹಾಗೂ ಕರಡಿಗಳ ಸೇನೆಯನ್ನು ರಚಿಸಿ, ಅದನ್ನು ಸಂಪನ್ಮೂಲವನ್ನಾಗಿ ಸಮರ್ಥವಾಗಿ ಬೆಳೆಸಿ ಬಳಸಿದ್ದನು. ಯಾವ ಋತುಮಾನದಲ್ಲಿ, ಯಾವ ಪ್ರದೇಶದಲ್ಲಿ ಹವಾಮಾನಕ್ಕೆ ತಕ್ಕಂತೆ ತರಕಾರಿ, ಹಣ್ಣು, ಧಾನ್ಯಾದಿಗಳನ್ನು ಬೆಳೆಸುವುದರ ಬಗ್ಗೆ ಶಾಸ್ತ್ರಗಳಲ್ಲಿ ವಿಪುಲ ಉಲ್ಲೇಖವಿದೆ. ಚಿಂತನೆಯಿದೆ. ಇವೆಲ್ಲ ಲೋಕೋಪಕಾರಕ ಚಿಂತನೆಯ ಸರಣಿ.

**ಸಂದರ್ಶಕ:** ದರ್ಶನಶಾಸ್ತ್ರಗಳ ಶಾಸ್ತ್ರೀಯಪರಂಪರೆ ಕ್ಷೀಣವಾಗುತ್ತಿರುವುದರ ಬಗ್ಗೆ ತಮ್ಮ ಅನಿಸಿಕೆಯೇನು?

**ಆಚಾರ್ಯರು:** ದರ್ಶನಶಾಸ್ತ್ರಗಳ ಉಗಮ, ವಿಕಾಸ, ಚಿಂತನೆ, ಅಪೂರ್ವವಾಗಿದೆ. ಸೂತ್ರ, ಭಾಷ್ಯ, ವಾರ್ತಿಕ, ವ್ಯಾಖ್ಯಾನ, ಟೀಕೆ, ಕಾರಿಕೆ ಮುಂತಾದ ಪ್ರಕಾರಗಳನ್ನು ಗಮನಿಸಿದಾಗ ನಮ್ಮ ಪ್ರಾಚೀನರು ಎಷ್ಟೊಂದು ಸ್ವತಂತ್ರವಾಗಿ ವಸ್ತುನಿಷ್ಠವಾಗಿ ಚಿಂತನಶೀಲ ಪ್ರವೃತ್ತಿಯುಳ್ಳವರಾಗಿದ್ದರು ಎಂಬುದನ್ನು ಊಹಿಸಬಹುದು. ಇಂತಹ ನೂರಾರು ಕೃತಿಗಳನ್ನು ಗಮನಿಸಿದಾಗ ಸಂಸ್ಕೃತಜ್ಞರು ಅದೆಷ್ಟು ತೀಕ್ಷ್ಣಮತಿಗಳಾಗಿದ್ದರೆಂದು ಸ್ಪಷ್ಟವಾಗುತ್ತದೆ. ಆದರೆ ಅತ್ಯಂತ ಶೋಚನೀಯ ವಿಷಯವೆಂದರೆ ಇಂದು ಇಂತಹ ಶಾಸ್ತ್ರೀಯವಾದ ಆಳವಾದ ಅಧ್ಯಯನ, ನಿರ್ದಿಷ್ಟ ವಿಷಯದ ಬಗ್ಗೆ ವಾಕ್ಯಾರ್ಥಸಭೆಗಳು ಕಡಿಮೆಯಾಗುತ್ತಿದೆ. ಅಪರೂಪಕ್ಕೆ ಒಂದೊಂದು ಕಡೆ ಒಂದೊಂದು ಶಾಸ್ತ್ರದ ಅಧ್ಯಯನ, ಅಧ್ಯಾಪನ, ನಡೆಯುತ್ತಿದ್ದರೂ ಅದು ಸಮರ್ಪಕವಾಗಿಲ್ಲ. ಶಾಸ್ತ್ರಗಂಥಗಳಿಗೆ ನೇರವಾದ ಭಾಷ್ಯ ವ್ಯಾಖ್ಯಾನಗಳಿವೆ. ಅವುಗಳ ಅಧ್ಯಯನವು ಈಗ ನಡೆಯುತ್ತಿಲ್ಲ. ಅದರ ಬದಲಿಗೆ ಮಧ್ಯಕಾಲದ ವ್ಯಾಖ್ಯಾನ ಗ್ರಂಥಗಳ ಕೆಲವು ಭಾಗಗಳ ಪಾಠ ಪ್ರವಚನ ಮಾತ್ರ ನಡೆಯುತ್ತಿದೆ. ಸದ್ಯದ ಪರಿಸ್ಥಿತಿಯನ್ನು ಅವಲೋಕಿಸಿದಾಗ ಆ ದಿನಗಳು ಈ ಶತಕದಲ್ಲಿ ಬರುವ ಸಂಭವವಿಲ್ಲ. ಆ ದಿನಗಳು ಕಳೆದುಹೋದವು.

**ಸಂದರ್ಶಕ:** ಹಿಂದಿನ ದಿನಗಳಿಗಿಂತಲೂ ಈಗ ಸಂಸ್ಕೃತಕ್ಕೆ ಹೆಚ್ಚು ಪ್ರೋತ್ಸಾಹ ದೊರೆಯುತ್ತಿದೆಯೆನಿಸುತ್ತಿದೆಯೇ?

**ಆಚಾರ್ಯರು:** ಹೌದು. ಇಂದು ಸಂಸ್ಕೃತಕ್ಕೆ ಸರ್ಕಾರಗಳು ವಿಶೇಷವಾಗಿ ಪ್ರೋತ್ಸಾಹ ನೀಡುತ್ತಿವೆ. ಭಾರತಸರ್ಕಾರವು ಸಂಸ್ಕೃತಕ್ಕಾಗಿ ನೂರಾರು ಕೋಟಿರೂಪಾಯಿಗಳನ್ನು ಪಂಚವಾರ್ಷಿಕ ಯೋಜನೆಯಲ್ಲಿ ಕಾದಿರಿಸಿದೆ. ಆದರೆ ದರ್ಶನಶಾಸ್ತ್ರ, ಇನ್ನಿತರ ಜ್ಞಾನಪ್ರಕಾರಗಳನ್ನು ತಳಸ್ಪರ್ಶಿಯಾಗಿ ಪಾಠಮಾಡಬಲ್ಲವರು ಇಲ್ಲ. ಪಾಠ ಕಲಿಯುವವರೂ ಇಲ್ಲದಂತಾಗಿದೆ. ಹೀಗಾಗಿ ಶಾಸ್ತ್ರಗಳ ಪ್ರೌಢಹಂತದ ಅಧ್ಯಯನ ಕನಸಿನ ವಿಷಯ. ಎಲ್ಲೆಡೆ ಸಂಸ್ಕೃತವನ್ನು ಭಾಷೆಯಾಗಿ ಪ್ರಾಥಮಿಕ ಹಂತದಲ್ಲಿ ಕಲಿಸುವ ಕೆಲಸ ಅತ್ಯಲ್ಪ

ಪ್ರಮಾಣದಲ್ಲಿ ನಡೆಯುತ್ತಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವೂ ಕೂಡ ಸಂಸ್ಕೃತವನ್ನು ಭಾಷೆಯ ರೂಪದಲ್ಲಿ ಕಲಿಸಲು ಹೊಸ ಹೊಸ ಯೋಜನೆಗಳನ್ನು ಹಾಕಿಕೊಳ್ಳಬೇಕು. ಹೀಗಾದಾಗ ಸಂಸ್ಕೃತದ ಪ್ರಥಮಸೋಪಾನವನ್ನಾದರೂ ಉಳಿಸಿಕೊಂಡಂತಾಗುತ್ತದೆ.

**ಸಂದರ್ಶಕ:** ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ ಮುಂತಾದ ವೇದಾಂತಶಾಖೆಗಳು ಅನುಭವದ ವಿಷಯವಾಗಬೇಕಿತ್ತು. ಆದರೆ ಇಂದು ಅನುಭವವಿಲ್ಲದೆಯೇ ಕಾದಾಟ ನಡೆಯುತ್ತಿದೆಯಲ್ಲ?

**ಆಚಾರ್ಯರು:** ಇದೊಂದು ಅತ್ಯಂತ ಸಾಮಯಿಕ ಪ್ರಶ್ನೆ. ಉಪನಿಷತ್ತು, ಬ್ರಹ್ಮಸೂತ್ರ, ಭಗವದ್ಗೀತೆ ಎಂಬ ಪ್ರಸ್ಥಾನತ್ರಯಕ್ಕೆ ಆಚಾರ್ಯರು ತಾವು ಹೊಂದಿದ ಕಾಣ್ಕೆಯಂತೆ ಭಾಷ್ಯವನ್ನು ಅನುಗ್ರಹಿಸಿದ್ದಾರೆ. ಅದನ್ನು ಅಧ್ಯಯನ ಮಾಡಿ ತತ್ತ್ವಾನುಸಂಧಾನ ಮಾಡಿ ಸಾಕ್ಷಾತ್ಕಾರವನ್ನು ಹೊಂದಬೇಕು. ಇದು ಜೀವನದ ಚರಮ ಧ್ಯೇಯ. ಸಾಕ್ಷಾತ್ಕಾರ ನೂರನೇ ಮೆಟ್ಟಿಲಾಗಿರಬಹುದು. ಆದರೆ ನಾವು ಇನ್ನೂ ಎರಡು ಅಥವಾ ಮೂರನೇ ಮೆಟ್ಟಿಲನ್ನು ಏರಿದ್ದೇವೆ. ಕಾಣದ ದೃಶ್ಯದ ಬಗ್ಗೆ ಊಹಾಪೋಹಮಾಡಿಕೊಂಡು ವಾದ ವಿವಾದಗಳನ್ನು ನಡೆಸುತ್ತಿದ್ದೇವೆ. ಖಂಡನೆ ಮಂಡನೆಗಾಗಿ ಲೆಕ್ಕವಿಲ್ಲದಷ್ಟು ಲೇಖನಗಳು ಪುಸ್ತಕಗಳು ಪ್ರಕಟವಾಗಿವೆ. ರಾಗದ್ವೇಷಗಳು ಹೆಚ್ಚಾಗಿವೆ. ಮನಸ್ಸಮಾಧಾನವೆಂಬುದು ದೊರೆಯಲೇ ಇಲ್ಲ. ಈ ಹಂತದಲ್ಲಿ ಇದನ್ನು ನೆನಪಿಸಿ ಕೊಳ್ಳಬೇಕು.

ಶಮಾರ್ಥಂ ಸರ್ವಶಾಸ್ತ್ರಾಣಿ ವಿಹಿತಾನಿ ಮನೀಷಿಭಿಃ ।
ಸ ಏವ ಸರ್ವಶಾಸ್ತ್ರಜ್ಞಃ ಯಸ್ಯ ಶಾಂತಮಿದಂ ಮನಃ ॥

**ಸಂದರ್ಶಕ:** ವೇದಶಾಸ್ತ್ರಗಳ ಅಧ್ಯಯನ ಕೆಲವರಿಗೆ ಮಾತ್ರ ಸೀಮಿತವೇ?

**ಆಚಾರ್ಯರು:** ಖಂಡಿತವಾಗಿಯೂ ಇಲ್ಲ. ಆಸಕ್ತರೆಲ್ಲರೂ ಇದಕ್ಕೆ ಅರ್ಹರು. ಜನರ ಮನಸ್ಸನ್ನು ಹದಗೊಳಿಸಲೆಂದೆ ಸಂಸ್ಕಾರಕೊಡಲು ವೇದಶಾಸ್ತ್ರಗಳು ಪ್ರವೃತ್ತವಾಗಿವೆ. ಆದ್ದರಿಂದ ವೇದಶಾಸ್ತ್ರಾಧ್ಯಯನವನ್ನು ಆಸಕ್ತರೆಲ್ಲರೂ ಮಾಡಬಹುದು. ಸ್ತ್ರೀಯರೂ ಅಧ್ಯಯನ ಮಾಡಬಹುದೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

**ಸಂದರ್ಶಕ:** ತಮ್ಮ ಅಧ್ಯಯನ ದಿನಗಳ ಬಗ್ಗೆ ಮೆಲುಕು ಹಾಕಬಹುದಲ್ಲ?

**ಆಚಾರ್ಯರು:** ಓಹೋ! ಅವಶ್ಯವಾಗಿ. ನನ್ನದೇ ಹೆಸರಿನ ಇನ್ನೂ ಇಬ್ಬರು ದಿವಂಗತ ಇ.ಎಸ್. ವರದಾಚಾರ್ಯರು (ಮೀಮಾಂಸಾ), ಎಸ್. ವರದಾಚಾರ್ಯರು (ವ್ಯಾಕರಣ) ನನ್ನ ಸಹಪಾಠಿಗಳಾಗಿದ್ದರು. ಹೀಗಾಗಿ ನಮ್ಮನ್ನು ವರದತ್ರಯರೆಂದು ಎಲ್ಲರೂ ಗೌರವಿಸುತ್ತಿದ್ದರು. ನಮ್ಮ ಗುರುಗಳು ದೀಕ್ಷಾಚಾರ್ ಎಂಬುವವರು. ನಾವು ಮನೆಯಿಂದ ಸಂಸ್ಕೃತ ಪಾಠಶಾಲೆಗೆ ನಡೆದುಕೊಂಡೇ ಹೋಗುತ್ತಿದ್ದೆವು. ದಾರಿಯುದ್ದಕ್ಕೂ ಸೂತ್ರ ಹಾಗೂ ಭಾಷ್ಯಗಳ ವಾಕ್ಯಗಳನ್ನು ಆವೃತ್ತಿಮಾಡುವುದು ನಮ್ಮ ಪ್ರವೃತ್ತಿಯಾಗಿತ್ತು. ಇದನ್ನು ನೋಡುತ್ತಿದ್ದ ಗೃಹಸ್ಥರು ಈ ರಸ್ತೆಯ ಗಿಡಮರಗಳಿಗೂ ಸೂತ್ರಭಾಷ್ಯ ಕಂಠಸ್ಥವಾಗಿದೆ ಎಂದು ಹಾಸ್ಯಮಾಡುತ್ತಿದ್ದರು. ಆಗ ನಮಗೆ ಶಾಸ್ತ್ರಚಿಂತನೆ ಎಂಬ ಏಕಾಂಶಕಾರ್ಯಕ್ರಮ ಮಾತ್ರ ಇರುತ್ತಿತ್ತು. ಭೂತ ಭವಿಷ್ಯದ ಬಗ್ಗೆ ಚಿಂತೆ ಇರುತ್ತಿರಲಿಲ್ಲ. ಸ್ವಾಧ್ಯಾಯವನ್ನು ನಾವು ತಪಸ್ಸನ್ನಾಗಿಯೇ ಭಾವಿಸಿದ್ದೆವು.

**ಸಂದರ್ಶಕ:** ತಾವು ಸ್ಥಾಪಿಸಿರುವ ಗುರುಕುಲದ ಗುರಿ ಏನು?

**ಆಚಾರ್ಯರು:** ಇದೊಂದು ಪ್ರಾಯೋಗಿಕ ಗುರುಕುಲ ಮಾತ್ರ. ನೇಪಾಳದ ಉದ್ಯಮಿಯೊಬ್ಬರು ಪ್ರತಿ ತಿಂಗಳು ೨೦೦೦೦ ರೂ. ಧನಸಹಾಯ ಮಾಡುತ್ತಾರೆ. ಅವರ ಸದಾಶಯದಂತೆ ಈ ಗುರುಕುಲವು ನಡೆಯುತ್ತಿದೆ. ಇಲ್ಲಿ ಬಹುತೇಕ ನೇಪಾಳದ ವಿದ್ಯಾರ್ಥಿಗಳೇ ಶಾಸ್ತ್ರ ವ್ಯಾಸಂಗ ಮಾಡುತ್ತಾರೆ. ಜ್ಞಾನ ದೃಷ್ಟಿಯಿಂದಲೇ ಹೊರತು ಪರೀಕ್ಷಾ ದೃಷ್ಟಿಯಿಂದಲ್ಲ.